ಅನುಮಾನ ಪಡಬಹುದು. ದಾನಿಗಳು ಯಾವಾಗಲೂ ಒಳ್ಳೆಯ ಉದ್ದೇಶದಿಂದಲೇ ದಾನ ಕೊಡುತ್ತಾರೆ. ಅವರಿಗೂ ಒಳ್ಳೆಯ ಹೆಸರು ಬರುವ ರೀತಿಯಲ್ಲೇ ಲೋಕೋಪಯೋಗಿ ಇಲಾಖೆಯು ಮುಖಾಂತರವೇ ಕೆಲಸವನ್ನು ಮಾಡಿಸುತ್ತೇವೆ.

ಶ್ರೀ ಎಂ. ರಾಮಪ್ಪ.—೫ ಲಕ್ಷಕ್ಕೆ ಎಷ್ಟು ಸೀಮಿತ ಮಾಡುತ್ತೀರೋ ಅಷ್ಟರ ಒಳಗೇ ಕೆಲಸ ಮಾಡುತ್ತೇವೆ. ಮಿಕ್ಕ ೫೦ ಲಕ್ಷವನ್ನು ನಾವು ಖರ್ಚು ಮಾಡಿದರು ಪಾಲು ತೆಗೆದುಕೊಂಡು ಲಾಭ ಮಾಡಬೇಕೆಂದೇನೂ ಇಲ್ಲ. ನೀವು ಎಷ್ಟು ಖರ್ಚು ಮಾಡುತ್ತೇವೆಂದು ಹೇಳುತ್ತೀರೋ ಅಷ್ಟಕ್ಕೆ ಸೀಮಿತ ಮಾಡಿದರೂ ಅಷ್ಟರಲ್ಲೇ ನಿಮ್ಮ ನಕ್ಷೆ ಪ್ರಕಾರ ಕೆಲಸ ಮಾಡುವುದಕ್ಕೆ ರೆಡಿಯಿದ್ದಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಲೋಕೋಪಯೋಗಿ ಇಲಾಖೆಯ ಜೊತೆಯಲ್ಲಿ ವಿಚಾರ ಮಾಡಿ ಈ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ಕೆ.ಹೆಚ್. ಪಾಟೀಲ್.—ಇದು ಯೋಗ್ಯ ಸಲಹೆ ಇದೆ. ಹಣ ಮಿಸ್‌ಯೂಸ್ ಆಗುವುದಿಲ್ಲ, ನೀವು ಹಣವನ್ನು ಹೆಚ್ಚು ಖರ್ಚು ಮಾಡುವುದೂ ಬೇಡ. ನೀವು ಏನಾದರೂ ಒಂದು ನಿರ್ದಿಷ್ಟ ನಿಲುವು ಮಾಡಿ ಲೋಕೋಪಯೋಗಿ ಮಂತ್ರಿಗಳ ಸಲಹೆ ತೆಗೆದುಕೊಂಡು ನೀವು ೧೫ ಲಕ್ಷ ಆವರು ಒಂದು ೧೦ ಲಕ್ಷ ಹಾಕಿ ಮಾಡಿದರೆ ಬಿಲ್ಡಿಂಗ್ ಆಗುತ್ತದೆ- ಹಣವೂ ಉಳಿಯುತ್ತದೆ ಸರ್ಕಾರಕ್ಕೆ ಕೀರ್ತಿಯೂ ಬರುತ್ತದೆ. ನೀವು ಹೀಗೆ ಏತಕ್ಕೆ ಮಾಡುತ್ತಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ಯಾವುದೇ ಒಂದು ಕಾಮಗಾರಿಯನ್ನು ಮಾಡಬೇಕಾದರೆ ಕೆಲವೊಂದು ನಿಯಮಗಳಿರುತ್ತವೆ. ಟೆಂಡರ್ ಕರೆಯಬೇಕು, ಅದಕ್ಕೆ ಒಪ್ಪಿಗೆ ಆಗಬೇಕು ಇದೆಲ್ಲಾ ಆಗಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸಾರ್ವಜನಿಕವಾಗಿ ಆರ್ಥಿಕ ಸಹಾಯ ದೊರೆಯುವುದಾದರೆ ಸ್ವಾಗತ ಮಾಡುತ್ತೇವೆ. ನಾವೇ ಕೊಡಬೇಕೆನ್ನುವ ಉದ್ಧಟತನ ನಮಗೆ ಇಲ್ಲ. ಆದರೆ ಯಾವ ಕಾಮಗಾರಿ ಮಾಡಬೇಕಾದರೂ ಯಾವ ಕೆಲಸಕ್ಕಾದರೂ ಸಾರ್ವಜನಿಕರು ಮುಂದೆ ಕೊಡಲಿಕ್ಕೆ ಮುಂದೆ ಬಂದರೆ ಆ ಕೆಲಸಗಳನ್ನು ಮಾಡಲಿಕ್ಕೆ ಅಂದಾಜು, ನಕ್ಷೆ ತಯಾರಾಗಬೇಕು ಅದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಆಗಬೇಕು. ಆದನ್ನು ನಾವು ಕೊಡುತ್ತೇವೆ. ಆದು ಆದಮೇಲೆ ಹಣ ಕೊಡಲಿಕ್ಕೆ ಆವರೇ ಕೊಡಲಿ ನಾವೇ ಕೊಡಲಿ ಫಿಫ್ಟಿ ಫಿಫ್ಟಿ ಕೊಡಲಿಕ್ಕೆ ಸರ್ಕಾರದ ನೀತಿಯನ್ನು ನಿರೂಪಣೆಮಾಡಿ ಪರಿಶೀಲನೆ ಮಾಡುತ್ತೇವೆ.

ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ೧ ಮತ್ತು ೨ನೇ ತರಗತಿಯ ಮಕ್ಕಳಿಗೆ ಉಚಿತ ಸಮವಸ್ತ್ರ ಹಂಚುವ ಬಗ್ಗೆ

೯೪೧ (೨೯೨) ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೫-೮೬ ರಿಂದ ೧೯೮೭-೮೮ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ೧ ಮತ್ತು ೨ನೇ ತರಗತಿಯ ಮಕ್ಕಳಿಗೆ ಉಚಿತ ಸಮವಸ್ತ್ರ ಹಂಚಲು ಖರ್ಚಾದ ಒಟ್ಟು ಹಣವೆಷ್ಟು ? (ಜಿಲ್ಲಾವಾರು ವೆಚ್ಚದ ಅಂಕಿ ಅಂಶ ಒದಗಿಸುವುದು)

ಆ) ೧೯೮೮-೮೯ನೇ ಸಾಲಿನಲ್ಲಿ ಈ ಯೋಜನೆಯನ್ನು ಮುಂದುವರೆಸಿದೆಯೇ ? ಇಲ್ಲದಿದ್ದರೆ ಕಾರಣವೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಸರ್ಕಾರಿ ಪ್ರಾಥಮಿಕ ಶಾಲಾ ೧ ಮತ್ತು ೨ನೇ ತರಗತಿಯ ಮಕ್ಕಳಿಗೆ ಉಚಿತ ಸಮವಸ್ತ್ರಗಳ ಖರ್ಚಿನ ವಿವರಗಳು.

ವರ್ಷ	ವೆಚ್ಚ
೧೯೮೫–೮೬	೧೦,೩೪,೪೭,೨೨೦–೦೦
೧೯೮೬–೮೭	೬,೨೯,೯೮,೬೮೯–೦೦
೧೯೮೭–೮೮	೭,೪೮,೪೪,೧೧೪–೦೦

(ಜಿಲ್ಲಾವಾರು ವೆಚ್ಚದ ಪಟ್ಟಿಯನ್ನು ಲಗತ್ತಿಸಿದೆ)

೨) ೧೯೮೮–೮೯ನೇ ಸಾಲಿನಲ್ಲಿ ಈ ಯೋಜನೆಯನ್ನು ಮುಂದುವರೆಸಿದೆ.

೧೯೮೫–೮೬ ರಿಂದ ೧೯೮೭–೮೮ರ ವರೆಗೆ ೧ ಮತ್ತು ೨ನೇ ತರಗತಿಯ ಎಲ್ಲಾ ಗಂಡು ಮತ್ತು ಹೆಣ್ಣುಮಕ್ಕಳಿಗೆ "ಉಚಿತ ಸಮವಸ್ತ್ರ" ಹಂಚಿರುವ ಬಗ್ಗೆ ಆಗಿರುವ ಖರ್ಚಿನ ಜಿಲ್ಲಾವಾರು ವಿವರ"

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	೧೯೮೫–೮೬	೧೯೮೬–೮೭	೧೯೮೭–೮೮
೧	ಬೆಂಗಳೂರು ಉತ್ತರ	೧೬,೧೦,೩೬೦–೦೦	೬,೦೫,೧೦೫–೦೦	೧೦,೯೫,೮೧೦–೦೦
೨	ಬೆಂಗಳೂರು ದಕ್ಷಿಣ	೨೦,೦೧,೭೬೩–೦೦	೧೨,೮೩,೫೦೦–೦೦	೧೫,೮೫,೪೨೦–೦೦
೩	ಬೆಂಗಳೂರು ಗ್ರಾಮಾಂತರ	೫೧,೬೩,೧೮೩–೦೦	೩೭,೫೬,೨೯೩–೦೦	೩೮,೩೩,೦೯೦–೦೦
೪	ಶಿವಮೊಗ್ಗ	೫೪,೮೧,೦೩೩–೦೦	೨೭,೭೪,೦೯೩–೦೦	೪೦,೨೯,೦೯೦–೦೦
೫	ತುಮಕೂರು	೫೬,೪೧,೭೦೪–೦೦	೪೪,೪೨,೭೩೫–೦೦	೩೩,೨೦,೫೬೦–೦೦
೬	ಚಿತ್ರದುರ್ಗ	೭೦ ೫೫,೬೮೦–೦೦	೨೫,೧೭,೩೨೪–೦೦	೪೧,೦೨,೫೦೦–೦೦
೭	ಕೋಲಾರ	೫೫,೧೫,೮೦೬–೦೦	೪೧,೧೬,೬೫೦–೦೦	೪೨,೪೦,೪೬೦–೦೦
೮	ಗುಲ್ಬರ್ಗಾ	೬೨,೪೪,೪೮೮–೦೦	೫೦,೯೬,೮೩೩–೦೦	೫೨,೭೬,೭೯೦–೦೦
೯	ಬೀದರ್	೩೯,೭೯,೧೯೯–೦೦	೨೨,೨೯,೨೫೩–೦೦	೩೦,೯೧,೬೪೦–೦೦
೧೦	ಬಳ್ಳಾರಿ	೪೦,೯೭,೪೭೮–೦೦	೨೦,೩೬,೬೨೫ ೦೦	೩೫,೯೬,೭೯೦–೦೦
೧೧	ರಾಯಚೂರು	೪೩,೪೫,೫೯೨–೦೦	೩೮,೪೫,೨೬೨–೦೦	೪೨,೫೬,೫೭೦–೦೦
೧೨	ಮೈಸೂರು	೬೪,೬೭,೫೭೫–೦೦	೪೨,೯೬,೪೫೫–೦೦	೪೩,೨೩,೩೮೫–೦೦
೧೩	ಹಾಸನ	೫೦,೧೯,೬೩೩–೦೦	೨೧,೩೧,೮೨೨–೦೦	೨೭,೧೧,೨೫೩–೦೦
೧೪	ಚಿಕ್ಕಮಗಳೂರು	೨೮.೭೨,೦೧೨–೦೦	೧೫,೩೦,೦೨೯–೦೦	೧೮,೩೯,೮೬೭–೦೦
೧೫	ಪಂಡಿಕೇರಿ	೮,೯೪,೨೨೪–೦೦	೬,೨೯,೨೨೨–೦೦	೬,೧೪,೨೧೫–೦೦
೧೬	ದಕ್ಷಿಣ ಕನ್ನಡ	೪೧,೩೪,೮೦೫–೦೦	೨೯,೪೮,೯೬೦–೦೦	೨೯,೬೩,೧೧೩–೦೦
೧೭	ಮಂಡ್ಯ	೪೪,೯೪,೨೮೩–೦೦	೧೮,೫೯.೬೦೮–೦೦	೨೮,೬೨,೬೩೭–೦೦
೧೮	ಬೆಳಗಾಂ	೮೬.೭೩,೯೪೭–೦೦	೫೬,೨೯,೪೮೯–೦೦	೫೫,೮೩,೧೪೨–೦೦
೧೯	ಧಾರವಾಡ	೮೨,೬೬,೬೨೪–೦೦	೫೦,೫೧,೬೧೬–೦೦	೬೧,೦೯,೮೭೧–೦೦
೨೦	ಬಿಜಾಪುರ	೭೭,೭೪,೪೨೦–೦೦	೪೮,೫೫,೮೮೮–೦೦	೪೯,೬೫,೪೪೫–೦೦
೨೧	ಉತ್ತರ ಕನ್ನಡ	೩೯,೧೩,೪೧೧–೦೦	೧೩,೬೧,೩೫೭–೦೦	೨೪,೪೨,೨೬೬–೦೦
	ಒಟ್ಟು	೧೦೩೪.೪೭,೨೨೦–೦೦	೬೨೯,೯೮,೬೮೯–೦೦	೭೪೮,೪೪,೧೧೪–೦೦

ಶ್ರೀ ಎ.ಎಂ. ಹಿಂಡಸಗೇರಿ.—೧೯೮೫–೮೬ನೇ ಸಾಲಿನಲ್ಲಿ ೧ ಮತ್ತು ೨ನೇ ತರಗತಿಯಲ್ಲಿ ಕಲಿಯುವ ಮಕ್ಕಳಿಗೆ ಸಮವಸ್ತ್ರ ಹಂಚಲು ೧೦ ಕೋಟಿ ೩೪ ಲಕ್ಷ ೪೭ ಸಾವಿರದ ೨೨೦ ರೂ. ಗಳನ್ನು, ೧೯೮೬–೮೭ನೇ ಸಾಲಿನಲ್ಲಿ ೬ ಕೋಟಿ ೨೯ ಲಕ್ಷ ೯೮ ಸಾವಿರ ರೂ. ಗಳನ್ನು ಅದೇ ರೀತಿ ೧೯೮೭–೮೮ನೇ ಸಾಲಿನಲ್ಲಿ ೭ ಕೋಟಿ ೪೮ ಲಕ್ಷ ೪೪ ಸಾವಿರದ ೧೧೪ ರೂ. ಗಳನ್ನು ಖರ್ಚು ಮಾಡಲಾಗಿದೆಯೆಂದು ಪಟ್ಟಿಯಲ್ಲಿ ತಿಳಿಸಿದ್ದಾರೆ. ಇದನ್ನು ಪ್ರತಿವರ್ಷ ನೋಡಿದರೆ ೪ ಕೋಟಿ ೩ ಕೋಟಿ ಕಡಿಮೆ ಖರ್ಚಾಗಿದೆ. ಇದು ಏತಕ್ಕೆ ಹೀಗೆ ಆಗಿದೆ ? ಈ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕೆಂದು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ. ಎರಡನೆಯದಾಗಿ ಈ ಯೋಜನೆಯು ಈ ವರ್ಷ ಸಹ ಪಾಲು ಇದೆಯೇ ಹೇಗೆ ? ಕೊಡತಕ್ಕ ಸಮವಸ್ತ್ರಗಳನ್ನು ತಡವಾಗಿ ಮಕ್ಕಳಿಗೆ ಕೊಟ್ಟರೆ ಏನು ಪ್ರಯೋಜನವಿಲ್ಲ. ಈಗ ಕೊಡ

ತಕ್ಕ ಅರಿವೆ ಒಂದು ಸಾರಿ ನೀರಿಗೆ ಹಾಕಿದರೆ ಎರಡನೇ ಸಾರಿ ಉಡಲಿಕ್ಕೆ ಬರೋಲ್ಲ. ಅಂಗಿ ಹೋಗಿ ಚಡ್ಡಿ ಆಗುತ್ತದೆ ಚಡ್ಡಿ ಹೋಗಿ ಬಾಡಿ ಆಗುತ್ತದೆ. ಆದರ ಸಲುವಾಗಿ ನಾನು ಹೇಳುವುದೇನೆಂದರೆ ಈ ಯೋಜನೆಯನ್ನು ಬಿಟ್ಟು ಕಟ್ಟಡ ಕಟ್ಟಿಸಿದರೆ ಅನುಕೂಲವಾಗುತ್ತದೆ. ಪ್ರತಿವರ್ಷ ಈ ಯೋಜನೆಯಲ್ಲಿ ೩ ಕೋಟಿ ಖರ್ಚಿಗೆ ಕಡಿಮೆಯಾಗುತ್ತಾ ಎನ್ನುವ ವಿವರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಒಳ್ಳೆಯ ಉದ್ದೇಶದಿಂದ ಇದಕ್ಕೆ ಆಯವ್ಯಯದಲ್ಲಿ ಹಣವನ್ನು ತೆಗೆದು ಇಟ್ಟಿರುತ್ತೇವೆ. ಮಕ್ಕಳಿಗೆ ಸಮವಸ್ತ್ರ ಕೊಡಲಿಕ್ಕೆ ೧೯೮೬-೮೭ನೇ ಸಾಲಿನಲ್ಲಿ ೧೬ ಕೋಟಿ ೨೮ ಲಕ್ಷ ಇಟ್ಟಿದ್ದೇವೆ. ಆದರಲ್ಲಿ ೧೨ ಕೋಟಿ ೧೭ ಲಕ್ಷ ಖರ್ಚಾಗಿದೆ. ೧೯೮೭-೮೭ನೇ ಸಾಲಿನಲ್ಲಿ ೧೧ ಕೋಟಿ ೭೨ ಲಕ್ಷ ರೂಪಾಯಿಗಳನ್ನು ತೆಗೆದು ಇಟ್ಟಿದ್ದು ಅದರಲ್ಲಿ ೭ ಕೋಟಿ ೮೨ ಲಕ್ಷ ರೂಪಾಯಿಗಳನ್ನು ಸಮವಸ್ತ್ರ ಕೊಡಲಿಕ್ಕೆ ವೆಚ್ಚವಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಮೊದಲು ಬಂದು ಉತ್ತರ ಓದಿದರು. ಈಗೊಂದು ಉತ್ತರ ಹೇಳುತ್ತಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಇಲ್ಲಿ ಅಂಕಿಸಂಖ್ಯೆಗಳ ವ್ಯತ್ಯಾಸವಿದೆ, ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಮಂತ್ರಿಗಳು ಹೇಳುವುದರಲ್ಲಿ ಹೊಸದೇನೂ ಇಲ್ಲ, ಎಲ್ಲಾ ಮಾಮೂಲು. ಹೇಳುವುದು ಒಂದು, ಮಾಡುವುದು ಒಂದು.

ಶ್ರೀ ಎಂ. ಚಂದ್ರಶೇಖರ್.—೧೦ ಕೋಟಿ ೩೪ ಲಕ್ಷ ಜಿಲ್ಲರೆ ಹಣ ೧೦ರಿಂದ ೨ನೇ ತರಗತಿ ಮಕ್ಕಳಿಗೆ ಮಾತ್ರ. ಪರಿಶಿಷ್ಟ ಜಾತಿಯ ಹೆಣ್ಣು ಮಕ್ಕಳಿಗಾಗಿ ಸಮವಸ್ತ್ರ ಕೊಡಲಿಕ್ಕೆ ೧೦ರಿಂದ ೭ನೇ ತರಗತಿಯವರೆಗೆ ಓದುತ್ತಿರುವ ಮಕ್ಕಳಿಗೆ ಸೇರಿಸಿದರೆ ಒಟ್ಟು ಇಷ್ಟಾಗುತ್ತದೆ. ಮೊದಲಿನ ಉತ್ತರ ೧ ಮತ್ತು ೨ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ಖರ್ಚಾಗಿರುವಂತಹದ್ದು. ಆದರ ಜೊತೆಗೆ ಪರಿಶಿಷ್ಟ ಜಾತಿಯ ಹೆಣ್ಣು ಮಕ್ಕಳಿಗೆ ೧೦ರಿಂದ ೭ನೇ ತರಗತಿಯವರೆಗೆ ಕಲಿಯುತ್ತಿರುವ ಮಕ್ಕಳಿಗೂ ಕೊಡುತ್ತಿದ್ದೇವೆ. ಅದಕ್ಕಾಗಿ ಆಯವ್ಯಯದಲ್ಲಿ ತೆಗೆದಿಟ್ಟ ಹಣ ೧೬ಕೋಟಿ ೨೮ಲಕ್ಷ. ಆದರಲ್ಲಿ ೧೨ಕೋಟಿ ೧೭ಲಕ್ಷ ಖರ್ಚಾಗಿದೆ. ಅದೇರೀತಿ ೧೯೮೭-೮೭ನೇ ಸಾಲಿನಲ್ಲಿ ೧೧ಕೋಟಿ ೭೨ಲಕ್ಷ ತೆಗೆದಿರಿಸಲಾಗಿದೆ. ಆದರಲ್ಲಿ ೭ಕೋಟಿ ೮೨ಲಕ್ಷ ಖರ್ಚಾಗಿದೆ. ೧೯೮೭-೮೮ನೇ ಸಾಲಿನಲ್ಲಿ ೧೩ಕೋಟಿ ತೆಗೆದಿರಿಸಲಾಗಿದೆ. ಆದರಲ್ಲಿ ೯ಕೋಟಿ ೧೪ಲಕ್ಷ ಖರ್ಚಾಗಿದೆ. ಈ ರೀತಿ ವೆಚ್ಚ ಮಾಡಿದ್ದೇವೆ. ಇಲ್ಲಿ ವೆಚ್ಚ ಮಾಡುವಂಥಾದ್ದು ಆಯಾಯ ಜಿಲ್ಲೆಗಳಲ್ಲಿ ಆಯಾಯ ಪ್ರದೇಶಗಳಲ್ಲಿ ಕೆಲಸ ಮಾಡಿದ್ದರ ಮೇಲೆ ಹೋಗುತ್ತದೆ. ಬಜೆಟ್‌ನಲ್ಲಿ ಹಣ ತೆಗೆದಿಟ್ಟಿದ್ದೇವೆ. ಆದರೆ ಆಯಾಯ ಜಿಲ್ಲೆಗಳಲ್ಲಿ ಯಾವರೀತಿ ಕೆಲಸ ಮಾಡಿಕೊಂಡು ಹೋಗುತ್ತಾರೆ, ಆದರ ಮೇಲೆ ವೆಚ್ಚ ಈರೀತಿ ಆಗಿದೆ. ಮಾನ್ಯ ಸದಸ್ಯರು ಮತ್ತೊಂದು ಮಾತನ್ನು ಹೇಳಿದರು. ಏನೆಂದರೆ ಇದರ ಬದಲು ಕಟ್ಟಡಗಳಿಗೆ ಹಣ ಹಾಕಬಹುದಿತ್ತಲ್ಲ ಎಂದು, ಆದರೆ ಇಲ್ಲಿ ಈ ಮನೆಗೆ ಒಂದು ಮಾಹಿತಿಯನ್ನು ಕೊಡುವುದು ನನ್ನ ಕರ್ತವ್ಯ ಎಂದು ಕೊಂಡಿದ್ದೇನೆ. ಈ ಒಂದು ಕಾರ್ಯಕ್ರಮ ಜಾರಿಗೆ ಬಂದ ಮೇಲೆ ೧೯೮೫-೮೬ರಲ್ಲಿ ೧ ಮತ್ತು ೨ನೇ ತರಗತಿಯ ಗಂಡುಮಕ್ಕಳ ಸಂಖ್ಯೆ ೯ಲಕ್ಷ, ೫೮ ಸಾವಿರ, ೨೮೩ ಇದ್ದದ್ದು, ೧೯೮೬-೮೭ರಲ್ಲಿ ಅದು ೧೦ ಲಕ್ಷ, ೮೧ ಸಾವಿರ, ೧೮೦ ಮತ್ತು ೧೯೮೭-೮೮ರಲ್ಲಿ ೧೧ ಲಕ್ಷ, ೨೧ ಸಾವಿರ ೮೭೧ ಈ ರೀತಿಯಾಗಿ ಸುಮಾರು ಒಂದೂವರೆ ಲಕ್ಷ ಹೆಚ್ಚು ಮಕ್ಕಳು ಈ ಕಾರ್ಯಕ್ರಮದಿಂದ ಶಾಲೆಗಳಿಗೆ ಹೋಗುವಂತಾಗಿದೆ. ಅದೇರೀತಿ ಹೆಣ್ಣುಮಕ್ಕಳು ೧೯೮೫-೮೬ರಲ್ಲಿ ೮ ಲಕ್ಷ ೧೫ ಸಾವಿರ ೨೨೩ ಇರುವುದು ೧೯೮೬-೮೭ರಲ್ಲಿ ಕೂಡ ಹೆಚ್ಚಾಗಿದೆ. ಹೋದವರ್ಷ ೯ ಲಕ್ಷ ೬೨ ಸಾವಿರ ೬೨೬ರಷ್ಟಿದೆ. ಅವರ ಸಂಖ್ಯೆ ಸಹ ಹೆಚ್ಚಾಗಿದೆ. ಮತ್ತು ೩, ೪ನೇ ತರಗತಿಯ ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳು ೧೯೮೫-೮೬ರಲ್ಲಿ ೯೦ ಸಾವಿರದ ೯೫೭ ಪ್ರಾರಂಭದಲ್ಲಿ ಇದ್ದದ್ದು ಮೂರು ವರ್ಷಗಳಾದ ಮೇಲೆ ೧೯೮೭-೮೮ರಲ್ಲಿ ೧ ಲಕ್ಷ, ೯ ಸಾವಿರದ ೧೯೭ ಆಗಿದೆ. ೫ ಮತ್ತು ೭ನೇ ತರಗತಿಯ ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳು ೧೯೮೫-೮೬ರಲ್ಲಿ ೫೯ ಸಾವಿರದ ೬೯೧ ಇದ್ದದ್ದು ಹೋದವರ್ಷ ೧೯೮೭-೮೮ರಲ್ಲಿ ೭೫ ಸಾವಿರದ ೭೭೨ ರಷ್ಟಾಗಿದೆ. ಅಧ್ಯಕ್ಷರೇ, ಈ ಕಾರ್ಯಕ್ರಮದಿಂದ ಮಕ್ಕಳು ಶಾಲೆಗೆ ಹೆಚ್ಚಿಗೆ ಹೋಗುವುದು ಈ ಮಾಹಿತಿ ಪ್ರಕಾರ ಗೊತ್ತಾಗುತ್ತದೆ. ಈ ಕಾರ್ಯಕ್ರಮ ಒಳ್ಳೆಯ ಕಾರ್ಯಕ್ರಮ ಆಗಿದೆ. ಇದರ ಜೊತೆಗೆ ಕಟ್ಟಡಗಳಿಗೆ ಸ್ವಲ್ಪ ಹಣ ಕೊಡಿ ಎಂದು ಹೇಳಬೇಕೇ ಹೊರತು ಈ ಕಾರ್ಯಕ್ರಮದ ಬದಲಿಗೆ ಕಟ್ಟಡಗಳಿಗೆ ಪ್ರಾಶಸ್ತ್ಯ ಕೊಡಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಹೇಳಿರುವ ಅಂಕಿಗಅಂಶಗಳ ಪ್ರಕಾರ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಆದರೆ ಆಗಿರುವ ಖರ್ಚು ಅದಕ್ಕೆ ಅನುಗುಣವಾಗಿಲ್ಲ ಅದು ಕಡಿಮೆಯಾಗುತ್ತಿದೆ. ಅದಕ್ಕೆ ಏನು ಕಾರಣ ? ಅವರ ಸಂಖ್ಯೆಯ ಆಧಾರದ ಮೇಲೆ ಹಣ ಖರ್ಚಾಗುವಂತೆ ನೋಡಿಕೊಳ್ಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ನಾನು ಹೇಳಿದಹಾಗೆ ಆಯಾಯ ಜಿಲ್ಲೆಗಳಲ್ಲಿ ಮಾಡುವ ಖರ್ಚಿನ ಮೇಲೆ ಇದು ಹೋಗಿರುತ್ತದೆ. ಎರಡನೇಯದು ನಮ್ಮ ಆರ್ಥಿಕ ಮುಗ್ಗಟ್ಟಿನಿಂದ ಪ್ರಾರಂಭದಲ್ಲಿ ಖರ್ಚು ಸ್ವಲ್ಪ ಕಡಿಮೆಯಾಗಿದ್ದು ಅದು ಬರುತ್ತಾ ಬರುತ್ತಾ ಕಡಿಮೆಯಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಒಂದೊಂದು ಕಡೆ.....

ಅಧ್ಯಕ್ಷರು.—ತಾವು ಕೂಡ್ರಿ...

ಶ್ರೀ ಎ. ಎಂ. ಹಿಂಡಸಗೇರಿ.—ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ ಏನೆಂದರೆ ಪ್ರತಿ ವರ್ಷ ಮಕ್ಕಳು ಜಾಸ್ತಿ ಯಾಗುತ್ತಿದ್ದಾರೆ ಎಂದು. ಆದರೆ ಈ ಯೋಜನೆಯಿಂದೇನೂ ಮಕ್ಕಳು ಜಾಸ್ತಿ ಯಾಗುವುದಿಲ್ಲ. ನಮ್ಮ ಜನಸಂಖ್ಯೆಯಿಂದಾಗಿ ಮಕ್ಕಳು ಜಾಸ್ತಿ ಬರುತ್ತಿದ್ದಾರೆ. ಈ ಮಕ್ಕಳು ಜಾಸ್ತಿ ಇದ್ದರೂ ಸಹಿತ ಖರ್ಚು ಕಡಿಮೆ ಮಾಡಿದ್ದಾರೆ. ಕೋಟಿಗಟ್ಟಲೆ ಖರ್ಚು ಕಡಿಮೆ ಮಾಡಿದ್ದಾರೆ. ಪ್ರತಿವರ್ಷ ನೋಡಿದರೆ ಮೂರು ಕೋಟಿಗಿಂತ ಕಡಿಮೆ ಖರ್ಚು ಮಾಡಿದ್ದಾರೆ. ನನ್ನ ಎರಡನೇ ಪ್ರಶ್ನೆ ಏನೆಂದರೆ, ಈ ಸಮವಸ್ತ್ರಗಳನ್ನು ಯಾವ್ಯಾವ ಮೂಲದಿಂದ ಅಂದರೆ ನಮ್ಮ ರಾಜ್ಯದಿಂದ ಅಥವಾ ಬೇರೆ ರಾಜ್ಯದಿಂದ ಖರೀದಿ ಮಾಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.— ಈಗ ಮಾಹಿತಿ ಇಲ್ಲ. ಬೇಕಾದರೆ ಒಪಗಿಸಿ ಕೊಡುತ್ತೇನೆ.

ಸರ್ಕಾರದ ವತಿಯಿಂದ ಪುಸ್ತಕಗಳ ಸಗಟಂ ಖರೀದಿ ಯೋಜನೆ

೯೪೨ (೩೦೧೧) ಶ್ರೀ ಎಸ್. ಮುನಿಶಾಮಪ್ಪ (ಶಿಡ್ಲಘಟ್ಟ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಪುಸ್ತಕಗಳ ಸಗಟು ಖರೀದಿ ಯೋಜನೆಯನ್ನು ಸರ್ಕಾರದ ವತಿಯಿಂದ ಯಾವ ಸಾಲಿನಿಂದ ಪ್ರಾರಂಭಿಸಲಾಯಿತು, ಇದುವರೆಗೆ ಖರೀದಿಸಿರುವ ಪುಸ್ತಕಗಳ ಸಂಖ್ಯೆ ಮತ್ತು ಅವುಗಳ ಮಾಲ್ಯವೆಷ್ಟು? (ವಿವರಗಳನ್ನು ಲಗತ್ತಿಸುವುದು)

ಆ) ಈ ಯೋಜನೆಯಡಿಯಲ್ಲಿ ಖರೀದಿಸಲಾಗುವ ಪುಸ್ತಕಗಳ ಆಯ್ಕೆಯನ್ನು ಮಾಡುವಲ್ಲಿ ಅನುಸರಿಸುತ್ತಿರುವ ನಿಯಮಗಳು ಯಾವುವು ?

ಇ) ಸರ್ಕಾರಿ ನೌಕರರಾಗಿದ್ದು ಲೇಖಕರಾಗಿರುವವರ ಪ್ರಕಟಿತ ಪುಸ್ತಕಗಳನ್ನು ಆಯ್ಕೆ ಮಾಡಲು ಏನಾದರೂ ಪ್ರಾಶಸ್ತ್ಯ ನೀಡಲಾಗುತ್ತಿದೆಯೇ ? ಇಲ್ಲವಾದಲ್ಲಿ ಅವರಿಗೆ ಪ್ರೋತ್ಸಾಹ ನೀಡುವ ಯೋಜನೆಗಳು ಸರ್ಕಾರದ ಮುಂದಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಶಿಕ್ಷಣ ಇಲಾಖೆಯಲ್ಲಿ ಈ ಯೋಜನೆ ಯಡಿಯಲ್ಲಿ ಎರಡು ಸಗಟು ಖರೀದಿ ಸಮಿತಿಗಳಿವೆ.

೧) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪ್ರಾರಂಭ—೧೯೬೯-೭೦

೨) ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ—೧೯೮೩-೮೪ ರಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಖರೀದಿಸಿರುವ ಪುಸ್ತಕಗಳ ಸಂಖ್ಯೆ: ೧,೫೦,೫೪,೨೭೩ ಮೌಲ್ಯ ರೂ. ೨,೫೦,೯೭ ಳಳ೦-೬೩

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸಿರುವ ಪುಸ್ತಕಗಳ ಸಂಖ್ಯೆ: ೨,೧೩,೮೩೦ ಮೌಲ್ಯ ರೂ. ೨೩,೯೯,೧೪೮-೦೦